ಗಂಡ ಇಂತಾ ಮಾತಾಡಿದಾಗ ಮರವಟ್ಟು ನಿಂತಿದ್ದಳು ನಳಿನಿ. ಈ ಪರಿಯ ಧನ್ಯತಾಭಾವದ ಮಾತನ್ನು ಕೃತಜ್ಞತೆ ತುಳುಕುವ ದನಿಯಲ್ಲಿ ಯಾರಾದರೂ ಹೇಳಲು ಸಾಧ್ಯವೇ? ಅವಳಿಗಿದು ಕಲ್ಪನಾತೀತ. ಇಷ್ಟಕ್ಕೂ ತಾನು ಮಾಡುತ್ತಿರುವುದೇನು? ತನ್ನ ಪಾಲಿನ ಕೆಲಸ. ಅದನ್ನೇ ಹೇಳಿದ್ದಳು ನಳಿನಿ,

"ನೀವು ಹೊರಗೆ ಜಮೀನಲ್ಲಿ ಕೆಲಸ ಮಾಡ್ತೀರಿ. ನಾನು ಮನೆಯೊಳಗೆ ಕೆಲಸ ಮಾಡ್ತೀನಿ. ಇದ್ರಲ್ಲಿ ಉದ್ಧಾರದ ಮಾತು ಏನು ಬಂತು? ಇದು ನಮ್ಮಿಬ್ರಿಗೂ ಸೇರಿದ ಮನೆ ಅಲ್ವಾ? ಸಂಸಾರ ಅಲ್ವಾ?" ಗದ್ಗದಿತಳಾಗಿದ್ದಳು ನಳಿನಿ. ಅವಳನ್ನು ಅಳಿಸುವಂತಾ ಯಾವ ಮಾತು ತನ್ನ ಬಾಯಲ್ಲಿ ಬಂತು? ಹೃತ್ಪೂರ್ವಕವಾದ ಮೆಚ್ಚುಗೆ ಕೂಡಾ ಭಾವಪರವಶರನ್ನಾಗಿಸುತ್ತದೆ ಎನ್ನುವ ವಿಚಾರದಲ್ಲಿ ಅವನು ಅಜ್ಞ.

★★★

ಆರು ತಿಂಗಳು ಕಳೆಯುವಷ್ಟರಲ್ಲಿ ಸಿಹಿ ಸುದ್ದಿಯನ್ನು ಗಂಡನ ಕಿವಿಯಲ್ಲಿ ಉಲಿದಳು ನಳಿನಿ. ಮುಂದಿನ ವರ್ಷ ಎನ್ನುವ ಹೊತ್ತಿಗೆ ಈ ಮನೆಯ ಜಗುಲಿಯಲ್ಲಿ ಅಂಬೆಗಾಲಿಡುತ್ತಾ ಒಂದು ಮಗು ಓಡಾಡುತ್ತದೆಯೆನ್ನುವ ಕಲ್ಪನೆ ಮಾತ್ರದಿಂದಲೇ ಅನಂತ ಉಬ್ಬಿ ಹೋದ. ಒಂದರ ಹಿಂದಿನ್ನೊಂದರಂತೆ ಸುಖದ ಕ್ಷಣಗಳು ಸಾಲುಗಟ್ಟಿ ಬರುತ್ತಿವೆ. 'ಅಪ್ಪ, ಅಮ್ಮನ ಆಶೀರ್ವಾದ ತನ್ನ ಮೇಲಿದೆ' ಎನ್ನುವ ಸಾರ್ಥಕಭಾವ. ಸುಖದ ಅಲೆಗಳ ಮೇಲೆ ತೇಲುತ್ತಿರುವ ಅನುಭವ.

"ಇನ್ನು ನಾನು ಹೇಳಿದ ಹಾಗೆ ನೀನು ಕೇಳ್ಬೇಕು" ಅಂದಿದ್ದ ಅನಂತ.

"ಇಷ್ಟು ದಿನ ಅದೇ ಮಾಡಿದ್ದಲ್ವಾ? ಹೊಸ್ತಾಗಿ ಏನಿದೆ ಕೇಳೋಕೆ?"

"ಇದಪ್ಪಾ ಬುದ್ಧಿವಂತಿಕೆ ಅಂದ್ರೆ. ನೀನು ಹೇಳಿದ್ದನ್ನು ನಾನು ಕೇಳಿದ್ದೇ ಹೊರತು ನಿನಗೆ ಏನಾದ್ರೂ ಹೇಳಿದ್ದು ಅನ್ನೋದು ಉಂಟಾ?"

"ಮಹಾ, ಹೊಗೆಸೊಪ್ಪು ಬಿಟ್ಟಿದ್ದು ಇನ್ನೂ ನಿಮ್ಮ ತಲೇಲಿ ಕೊರೀತಿದೆ."

"ಹಂಗೇ ಅಂದ್ಕೋ..."

"ನಾನು ಎದುರಿಗಿಲ್ಲ ಅಂದ್ರೆ ಮತ್ತೆ ಶುರು ಮಾಡ್ಬಿಡ್ತೀರೇನೋ. ಹೇಳೋರಿರಲ್ಲ, ಕೇಳೋರಿರಲ್ಲ..."

"ನನ್ನ ಮೇಲೆ ಅಷ್ಟೂ ನಂಬಿಕೆ ಇಲ್ವೇನೇ? ಒಂದು ಸಲ ಮಾತು ಕೊಟ್ಟೆ ಅಂದ್ಮೇಲೆ ಮುಗೀತು..."

"ಭೀಷ್ಮ ನೀವು..." ಛಾಳಿಸಿದ್ದಳು ನಳಿನಿ.

"ಯಾರ್‍ಯಾರಿಗೋ ಹೋಲಿಸ್ಬೇಡ್ವೇ ಮಾರಾಯ್ತೀ. ಎರಡೂ ಕೈಲಿ ಸುಖ ಸುರ್ಕೋತಿರೋನು ನಾನು..."

"ಸಾಕಾ ಎರಡೇ ಕೈಯಿ?"

"ಸದ್ಯಕ್ಕಂತೂ ಸಾಕು."

ಮೊದಲಿನ ಹಾಗೆ ನಳಿನಿ ಮನೆಗೆಲಸಕ್ಕೆ ಮೈ ಬಗ್ಗಿಸಲು ಬಿಡುತ್ತಿರಲಿಲ್ಲ ಅನಂತ. ಮನೆಯ ಸುತ್ತುಗೆಲಸಗಳಿಗೆ ಹೆಣ್ಣಾಳಿನ ನೇಮಕ ಆಯ್ತು.

"ದುಡ್ಡು ಕುಣೀತಿದ್ಯಾ ನಿಮ್ಗೆ? ಅವಳಿಗೆ ಕೊಡೋ ಕೂಲಿ ನಂಗೇ ಕೊಟ್ಬಿಡಿ" ಅನ್ನದೆ ಇರಲಾಗಲಿಲ್ಲ ನಳಿನಿಗೆ.

"ಎಲ್ಲಾ ಹೊತ್ತಲ್ಲೂ ದುಡ್ಡಿನ ಮುಖ ನೋಡೋಕಾಗುತ್ತಾ? ಕೈಬಿಚ್ಚಿ ಖರ್ಚು ಮಾಡ್ಬೇಕಾದಾಗ ಮಾಡ್ಲೇಬೇಕು. ದುಡ್ಡಿರೋದೇ ನಮ್ಮ ಅಗತ್ಯಕ್ಕೆ" ಅಂದಿದ್ದ ಅನಂತ. ನಳಿನಿ ಹೇಳಿದಂತೆ ದುಡ್ಡು ಕುಣಿಯುವ ಸಂಸಾರ ಅಲ್ಲ ಅವರದು. ಆದರೆ ಪ್ರಾಮಾಣಿಕವಾಗಿ ದುಡಿದರೆ ಹೊಟ್ಟೆಬಟ್ಟೆಗೆ ಕೊರತೆಯಿಲ್ಲ. ಜಾಸ್ತಿ ಖರ್ಚೇನಿರದೆ ಒಬ್ಬಂಟಿಯಾಗಿ ಸಂಸಾರದ ನೊಗ ಎಳೆಯುವಾಗ ಅಷ್ಟಿಷ್ಟು